# ಜೊಲ್ಲೆ ಗ್ರುಪ್ ವಾರ್ತಾ ಪತ್ರ ದರ್ಪಣ

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಮೇ 2025–ಸಂಪುಟ–9 ಸಂಚಿಕೆ–05




## ನಿಪ್ಪಾಣಿಯಲ್ಲಿ ಜೊಲ್ಲೆ ಗ್ರೂಪ್ ಆಯೋಜಿಸಿದ

# ನೇಗಿಲಯೋಗಿಯ ಏಳಿಗೆಗೆ ಬೃಹತ್ ಕೃಷಿ ಉತ್ಸವ–2025

ನಿಪ್ಪಾಣಿಯ ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಜೊಲ್ಲೆ ಗ್ರುಪ್ ವತಿಯಿಂದ ಆಯೋಜಿಸಿದ ಕೃಷಿ ಉತ್ಸವವನ್ನು ಕೊಲ್ಲಾಪೂರ ಕನೇರಿ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಉದ್ಘಾಟಿಸಿ ಸಾವಯವ ಕೃಷಿಯಿಂದ ರೈತರ ಬದುಕು ಸ್ವಾವಲಂಬಿಯಾಗುತ್ತದೆ. ಕೃಷಿ, ರೈತ ಮತ್ತು ಮಣ್ಣಿನ ನಡುವೆ ಬಾಂಧವ್ಯ ಇದೆ. ಅದನ್ನು ಉಳಿಸುವ ಕೆಲಸ ಆಗಬೇಕಿದೆ. ಯುವ ಜನರು ಕೃಷಿ ಕಡೆ ಗಮನ ಕೊಡಬೇಕು. ಕೃಷಿಯಿಂದಲೇ ದೇಶ ಪ್ರಗತಿ ಸಾಧಿಸಲಿದೆ. ದೇಶ ಉಳಿಯಲು ಕೃಷಿ ಉಳಿಯಬೇಕು. ಯುವ ಜನರು ಕೃಷಿ ಕಡೆಗೆ ಮುಖ ಮಾಡುವ ಅನಿವಾರ್ಯತೆ ಇದೆ. ಕೃಷಿಯಲ್ಲಿ ಹೊಸ ಹೊಸ ತಂತ್ರಜ್ಞಾನವನ್ನು ಆಳವಡಿಸಿಕೊಳ್ಳಬೇಕು. ರಾಸಾಯನಿಕ ಗೊಬ್ಬರದ ಕಡೆ ಹೆಚ್ಚು ಗಮನ ಕೊಡದೆ ಸಾವಯವ ಕೃಷಿಯಿಂದ ಭೂಮಿಯ ಫಲವತ್ತತೆಯನ್ನು ಉಳಿಸಬೇಕಾಗಿದೆ. ಸಾವಯವ ಗೊಬ್ಬರದಿಂದ ಕೃಷಿಯಲ್ಲಿ ಅಮೂಲಾಗ್ರ ಬದಲಾವಣೆಯಾಗುತ್ತದೆ. ರೈತರಿಗೆ ಈ ಕುರಿತು ಸೂಕ್ತ ಮಾಹಿತಿ ನೀಡಬೇಕಾಗಿದೆ. ಹೀಗಾಗಿ ನಿಪ್ಪಾಣಿ ಶ್ರೀ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿ ಮತ್ತು ಜೊಲ್ಲೆ ಗ್ರುಪ್ ಕೃಷಿ ಉತ್ಸವ ಆಯೋಜಿಸಿ ರೈತರಿಗೆ ಸೂಕ್ತ ಮಾರ್ಗದರ್ಶನ ಕೊಡುವ ಸಂಕಲ್ಪ ಮಾಡಿರುವುದು ಸಂತಸ ತಂದಿದೆ. ಅಳಿವಿನ ಅಂಚಿನಲ್ಲಿದ್ದ ನಿಪ್ಪಾಣಿ ಹಾಲ ಶುಗರ್ ಮತ್ತು ಸಂಕೇಶ್ವರ ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆಯನ್ನು ಶ್ರೀ ಅಣ್ಣಾಸಾಹೇಬ ಜೊಲ್ಲೆ ಅವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಅಭಿವೃದ್ಧಿ ಪಡಿಸಿ ರೈತರಿಗೆ ಅನುಕೂಲವನ್ನು ಕಲ್ಪಿಸಿದ್ದಾರೆ. ಐದು ದಿನಗಳ ಕಾಲ ನಡೆಯುವ ಕೃಷಿ ಉತ್ಸವದಲ್ಲಿ ನುರಿತ ಉಪನ್ಯಾಸಕರಿಂದ ಕೃಷಿ ಕುರಿತು ಉಪನ್ಯಾಸ ನಡೆಯಲಿದೆ. ಗಡಿ ಭಾಗದ ರೈತರು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಸೌ. ಶಶಿಕಲಾ ಜೊಲ್ಲೆ ಮಾತನಾಡಿ, ರೈತರು ದೇಶದ ಬೆನ್ನೆಲುಬು, ಆದರೆ ರೈತರು ಯಾವ ರೀತಿ ಕೃಷಿ ಮಾಡಿ ಉತ್ತಮ ಬೆಳೆ ಬೆಳೆಯಬೇಕೆಂಬುವುದರ ಮಾಹಿತಿ ಕೊರತೆ ಇದೆ. ಹೀಗಾಗಿ ರೈತರಿಗೆ ಕೃಷಿ ಕುರಿತು ಸಮಗ್ರ ಜ್ಞಾನವನ್ನು ಕೊಡಲು ಜೊಲ್ಲೆ ಗ್ರೂಪ್ ಮತ್ತು ಹಾಲಶುಗರ್ ಕೃಷಿ ಉತ್ಸವ ಆಯೋಜಿಸಿದೆ ಎಂದರು. ಭಾರತದಲ್ಲಿ ಪಾರಂಪರಿಕ ಕೃಷಿ ಪದ್ಧತಿ ನಶಿಸಿ ಹೋಗಿದೆ. ರೈತರಿಗೆ ಸೂಕ್ತ ಮಾರ್ಗದರ್ಶನ ಈ ಕೃಷಿ ಉತ್ಸವದಲ್ಲಿ ದೊರೆಯಲಿದೆ. ರೈತರು ರಾಸಾಯನಿಕ ಗೊಬ್ಬರ ಬಿಟ್ಟು ಸಾವಯವ ಕೃಷಿ ಮಾಡಲು ಮುಂದಾಗಬೇಕು. ಕೃಷಿಯಲ್ಲಿ ಹೊಸ ಹೊಸ ತಂತ್ರಜ್ಞಾನ ಅಳವಡಿಸಿ ಫಲವತ್ತಾದ ಭೂಮಿಯಲ್ಲಿ ಸಮೃದ್ಧವಾದ ಬೆಳೆ ಬೆಳೆಯಲು ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದರು.

ನಿಡಸೋಸಿ ಪ.ಪೂ. ನಿಜಲಿಂಗೇಶ್ವರ ಸ್ವಾಮೀಜಿ, ಬೆಳಗಾವಿ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಶ್ರೀ ಅಪ್ಪಾಸಾಹೇಬ ಕುಲಗೂಡೆ ಮಾತನಾಡಿ, ಕೃಷಿ ಉತ್ತವದಿಂದ ರೈತರಿಗೆ ಅನುಕೂಲವಾಗಲಿದೆ ಎಂದರು. ಮಾಜಿ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ನಿಪ್ಪಾಣಿ ಸಮಾಧಿಮಠದ ಪ.ಪೂ. ಶ್ರೀ ಪ್ರಾಣಲಿಂಗ ಸ್ವಾಮೀಜಿ, ಶ್ರೀ ಜ್ಯೋತಿಪ್ರಸಾದ ಜೊಲ್ಲೆ, ಮಾಜಿ ಸಂಸದ ಶ್ರೀ ಅಮರಸಿಂಹ ಪಾಟೀಲ, ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಶ್ರೀ ಬಸವರಾಜ ಕಲ್ಲಟ್ಟಿ, ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಶ್ರೀ ಎಂ. ಪಿ. ಪಾಟೀಲ, ನಗರಸಭೆ ಅಧ್ಯಕ್ಷ ಸೌ ಸೋನಲ್ ಕೊಠಾಡಿಯಾ, ಇಚಲಕರಂಜಿ ಮಾಜಿ ಶಾಸಕ ಶ್ರೀ ಸುರೇಶ ಹೆಳವನಕರ, ಚಂದರಗಿ ಕ್ರೀಡಾ ಶಾಲೆ ಉಪಾಧ್ಯಕ್ಷ ಶ್ರೀ ಮಹೇಶ ಭಾತೆ, ಯಕ್ಸಂಬಾ ಶ್ರೀ ಬೀರೇಶ್ವರ ಸಹಕಾರಿ ಸಂಸ್ಥೆಯ ಅಧ್ಯಕ್ಷ ಶ್ರೀ ಅಪ್ಪಾಸಾಹೇಬ ಜೊಲ್ಲೆ, ಹುಬ್ಬಳ್ಳಿ ಕೆ.ಓ.ಎಫ್. ನಿರ್ದೇಶಕರಾದ ಶ್ರೀ ಪ್ರಭು ಡಬ್ಬನ್ನವರ, ಶ್ರೀ ವೃಷಭ ಜೈನ, ಶ್ರೀ ಸುಮಿತ ಸಾಸನೆ, ಶ್ರೀ ವಿನಾಯಕ ಪಾಟೀಲ, ಶ್ರೀ ಅಮರ ನಲವಡೆ, ಶ್ರೀ ಸಂಜಯ ಪಾಟೀಲ, ಶ್ರೀ ದೀಪಕ ಪಾಟೀಲ, ಮುಂತಾದವರು ಉಪಸ್ಥಿತರಿದ್ದರು.

ಮಾಗ್ನಂ ಟಫ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಸವಪ್ರಸಾದ ಜೊಲ್ಲೆ ಸ್ವಾಗತಿಸಿದರು. ಶ್ರೀ ರಮೇಶ ಪಾಟೀಲ ನಿರೂಪಿಸಿದರು.


**ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ್)**

ಕ್ರಿಯಾತ್ಮಕ ಹಾಗೂ ಪ್ರಗತಿಶೀಲ...



ಎಪ್ರೀಲ್ 30 2025ರ ಆರ್ಥಿಕ ಸ್ಥಿತಿ

| | |
|---|---|
| ಶಾಖೆಗಳು | 226 (ಕರ್ನಾಟಕ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಾದ್ಯಂತ) |
| ಠೇವು | 4353+ ಕೋಟಿ |
| ಸಾಲ | 3422+ ಕೋಟಿ |
| ಸದಸ್ಯರು | 04+ ಲಕ್ಷ |
| ಗುಂತಾವಣೆ | 1098+ ಕೋಟಿ |
| ಲಾಭ 2024-25 | 45+ ಕೋಟಿ |









# ವಿಶ್ವ ಆರೋಗ್ಯ ದಿನ –2025

ಏಪ್ರಿಲ್ 7 ರಂದು ವಿಶ್ವ ಆರೋಗ್ಯ ದಿನವನ್ನು ಆಚರಿಸಲಾಗುತ್ತದೆ, ಇದು ವಿಶ್ವಸಂಸ್ಥೆಯ ಒಂದು ವಿಭಾಗವಾದ ವಿಶ್ವ ಆರೋಗ್ಯ ಸಂಸ್ಥೆಯ (WHO) ವಾರ್ಷಿಕೋತ್ಸವವನ್ನು ಸಹ ಸೂಚಿಸುತ್ತದೆ. ಪ್ರತಿ ವರ್ಷ, WHO ಒಂದು ನಿರ್ದಿಷ್ಟ ಸಾರ್ವಜನಿಕ ಆರೋಗ್ಯ ಕಾಳಜಿಯ ಮೇಲೆ ಕೇಂದ್ರೀಕರಿಸುತ್ತದೆ, ಈ ಸಮಯದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಎರಡೂ ಆರೋಗ್ಯ ರಕ್ಷಣಾ ಸಂಸ್ಥೆಗಳು ಮುಂದೆ ಬಂದು ಜಗತ್ತನ್ನು ಆವರಿಸಿರುವ ವಿವಿಧ ಆರೋಗ್ಯ ಕಾಳಜಿಗಳ ಕಡೆಗೆ ಶ್ರಮಿಸುತ್ತವೆ.

### ವಿಶ್ವ ಆರೋಗ್ಯ ದಿನ 2025 ರ ಥೀಮ್

ಈ ವರ್ಷ, 2025 ರ ವಿಶ್ವ ಆರೋಗ್ಯ ದಿನದ ಥೀಮ್ " ಆರೋಗ್ಯಕರ ಆರಂಭ, ಭರವಸೆಯ ಭವಿಷ್ಯ". ಈ ಥೀಮ್ ತಾಯಂದಿರು ಮತ್ತು ನವಜಾತ ಶಿಶುಗಳ ಆರೋಗ್ಯ ಮತ್ತು ಬದುಕುಳಿಯುವಿಕೆಯನ್ನು ಹೆಚ್ಚಿಸುವುದರ ಮೇಲೆ ಕೇಂದ್ರೀಕರಿಸುತ್ತದೆ ಮತ್ತು ತಪ್ಪಿಸಬಹುದಾದ ತಾಯಂದಿರು ಮತ್ತು ಶಿಶು ಮರಣಗಳ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ. ಈ ಅಭಿಯಾನವು ಗರ್ಭಾವಸ್ಥೆಯಲ್ಲಿ ಉತ್ತಮ ಗುಣಮಟ್ಟದ ಆರೈಕೆ ಮತ್ತು ಮಹಿಳೆಯರು ಮತ್ತು ಶಿಶುಗಳಿಗೆ ಪ್ರಸವಾನಂತರದ ಆರೈಕೆಯ ಮಹತ್ವವನ್ನು ಒತ್ತಿಹೇಳುತ್ತದೆ.

### ಸಾರ್ವತ್ರಿಕ ಆರೋಗ್ಯ ಪ್ರವೇಶವನ್ನು ಸ್ಥಾಪಿಸುವಲ್ಲಿ ವಿಶ್ವ ಆರೋಗ್ಯ ಸಂಸ್ಥೆ

ಎರಡನೇ ಮಹಾಯುದ್ಧದ ನಂತರ, ವಿವಿಧ ಸರ್ಕಾರಗಳು ಆರೋಗ್ಯ ಮತ್ತು ಅದರ ಸಾರ್ವತ್ರಿಕ ಲಭ್ಯತೆಯನ್ನು ಸಮಕಾಲೀನ ವಸಾಹತುಶಾಹಿ ನಂತರದ ರಾಜ್ಯಗಳನ್ನು ಸ್ಥಾಪಿಸುವ ಅಗತ್ಯ ವಿಧಾನವೆಂದು ಪರಿಗಣಿಸಿದವು.

ಫಊಓಔ (1948 ರಲ್ಲಿ ಸ್ಥಾಪನೆಯಾಯಿತು) ಇತರ ವಿಶ್ವಸಂಸ್ಥೆಯ (UN) ಸಂಸ್ಥೆಗಳ ಸಹಯೋಗದೊಂದಿಗೆ ಹೊಸ, ಮುಕ್ತ ಮತ್ತು ಆರೋಗ್ಯಕರ ಜಗತ್ತನ್ನು ಗುರಿಯಾಗಿರಿಸಿಕೊಂಡಿತು. ತರುವಾಯ, WHO ನ ಆರಂಭಿಕ ವರ್ಷಗಳಲ್ಲಿ ಮಲೇರಿಯಾ ನಿರ್ಮೂಲನೆ ಕಾರ್ಯಕ್ರಮದಂತಹ ಯೋಜನೆಗಳ ಪ್ರಾಮುಖ್ಯತೆಯ ಹೊರತಾಗಿಯೂ, ಇತರ ಆರೋಗ್ಯ-ಉತ್ತೇಜಿಸುವ ವಿಚಾರಗಳನ್ನು ಕೈಬಿಡಲಾಗಿಲ್ಲ.

ರಾಷ್ಟ್ರೀಯ ಸರ್ಕಾರಗಳೊಂದಿಗೆ ಹಲವಾರು ಒಪ್ಪಂದಗಳನ್ನು ರೂಪಿಸುವ ಮೂಲಕ ಸಾಮಾನ್ಯ ಆರೋಗ್ಯ ರಕ್ಷಣಾ ಕಾರ್ಯವಿಧಾನದ ವರ್ಧನೆಯ ಕೆಲಸವನ್ನು ಕೈಗೊಳ್ಳಲಾಯಿತು, ಇದು ಫಊಓಔ ಅನ್ನು ಸಾರ್ವತ್ರಿಕ ಆರೋಗ್ಯ ರಕ್ಷಣೆಗೆ ಮುಂಚೂಣಿಯಲ್ಲಿರಿಸಿತು.

### ವಿಶ್ವ ಆರೋಗ್ಯ ಸಂಸ್ಥೆಯ (WHO) ಇತಿಹಾಸ ಮತ್ತು ವಿಶ್ವ ಆರೋಗ್ಯ ದಿನದ ವಿಕಸನ

WHO ಒಂದು ಪ್ರಬುದ್ಧ ಸಂವಿಧಾನ ಮತ್ತು ಅಂತರರಾಷ್ಟ್ರೀಯ ಕಾನೂನುಬದ್ಧತೆಯನ್ನು ಹೊಂದಿರುವ ಪ್ರಮುಖ ಜಾಗತಿಕ ಆರೋಗ್ಯ ಸಂಸ್ಥೆಯಾಗಿದೆ. WHO ರಚನೆಯು ಒಂದು ಪ್ರತ್ಯೇಕ ಘಟನೆಯಲ್ಲ, ಮೈಲಿಗಲ್ಲುಗಳು ಈ ಕೆಳಗಿನಂತಿವೆ:

* ಡಿಸೆಂಬರ್ 1945 – ವಿಶ್ವಸಂಸ್ಥೆಯಲ್ಲಿ ಬ್ರೆಜಿಲ್ ಮತ್ತು ಚೈನೀಸ್ ಯಾವುದೇ ಸರ್ಕಾರಿ ನಿಯಂತ್ರಣದಿಂದ ಸಂಪೂರ್ಣವಾಗಿ ಮುಕ್ತವಾದ ಜಾಗತಿಕ ಆರೋಗ್ಯ ಸಂಸ್ಥೆಯನ್ನು ಸೂಚಿಸಿದವು.
* ಜುಲೈ 1946 – ವಿಶ್ವ ಆರೋಗ್ಯ ಸಂಸ್ಥೆಯ ಸಂವಿಧಾನವನ್ನು ಅಂಗೀಕರಿಸಲಾಯಿತು.
* ಏಪ್ರಿಲ್ 7, 1948 – ಸಂವಿಧಾನ ಜಾರಿಗೆ ಬಂದಿತು ಮತ್ತು 61 ರಾಷ್ಟ್ರಗಳು ಅದರ ಸ್ಥಾಪನೆಯಲ್ಲಿ ಭಾಗಿಯಾಗಿದ್ದವು.
* ಜುಲೈ 22, 1949 – ಮೊದಲ ವಿಶ್ವ ಆರೋಗ್ಯ ದಿನವನ್ನು ಆಚರಿಸಲಾಯಿತು, ಆದರೆ ನಂತರ ವಿದ್ಯಾರ್ಥಿಗಳ ಒಳಗೊಳ್ಳುವಿಕೆಯನ್ನು ಉತ್ತೇಜಿಸಲು ಏಪ್ರಿಲ್ 7 ಕ್ಕೆ ಬದಲಾಯಿಸಲಾಯಿತು.
* 1950 ರಿಂದ, WHO ಮಹಾನಿರ್ದೇಶಕರು ಪ್ರತಿ ವರ್ಷ ವಿಶ್ವ ಆರೋಗ್ಯ ದಿನಕ್ಕೆ ಸದಸ್ಯ ರಾಷ್ಟ್ರಗಳು ಮತ್ತು ಫಊಓಔ ಸಿಬ್ಬಂದಿಗಳ ಸಲ್ಲಿಕೆಗಳನ್ನು ಆಧರಿಸಿ ಹೊಸ ವಿಷಯ ಮತ್ತು ವಿಷಯವನ್ನು ಆಯ್ಕೆ ಮಾಡಿದ್ದಾರೆ.

50 ವರ್ಷಗಳ ನಂತರ, ವಿಶ್ವ ಆರೋಗ್ಯ ದಿನಗಳು ಮಾನಸಿಕ ಆರೋಗ್ಯ, ತಾಯಂದಿರು ಮತ್ತು ಮಕ್ಕಳ ಆರೈಕೆ ಮತ್ತು ಹವಾಮಾನ ಬದಲಾವಣೆಯಂತಹ ವಿವಿಧ ಆರೋಗ್ಯ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿವೆ. ಆಚರಣೆಯ ದಿನದ ಆಚೆಗೂ ಪೋಷಕ ಚಟುವಟಿಕೆಗಳು ಮುಂದುವರಿಯುತ್ತಿವೆ, ಇದು ಜಾಗತಿಕ ಆರೋಗ್ಯದ ಈ ಪ್ರಮುಖ ಅಂಶಗಳ ಮೇಲೆ ಜಾಗತಿಕ ಗಮನವನ್ನು ನೀಡುತ್ತಿದೆ.



# ಪರಿಸರದ ಬೆಳವಣಿಗೆಯಲ್ಲಿ ಸಾಲುಮರದ ತಿಮ್ಮಕ್ಕನ ಪಾತ್ರ

ಪರಿಸರವೆಂಬುದು ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲವಾಗಿದ್ದು, ಅದರ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ದಿನ ಕಳೆದಂತೆ ಪರಿಸರ ತನ್ನ ಅಸ್ತಿತ್ವ ಕಳೆದುಕೊಳುವಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನಾವೇ ಕಾರಣಿ ಕರ್ತೃರಾಗಿದ್ದೇವೆ. ಆಧುನೀಕರಣ ಮುನ್ನಡೆಯಿಂದಾಗಿ ಪರಿಸರದಲ್ಲಿ ಹಿನ್ನಡೆಯಾಗುವುದನ್ನು ಅರಿಯದೇ ಹೋಗುತ್ತಿದ್ದೇವೆ. ಬದಲಾವಣೆ ಜಗದ ನಿಯಮವಾದರೂ, ಅದರಿಂದ ಆಗುವ ನಷ್ಟಗಳನ್ನು ನಾವು ಅರಿಯದೇ ಮುಂದುವರೆಯುವುದರಿಂದ ಇದು ಮುಂದಿನ ಪೀಳಿಗೆಗೆ ನಷ್ಟ ಬರಿಸುವಂತಾಗುವುದು ಖಚಿತ.

**ಪರಿಸರ**

ನಮ್ಮ ಸುತ್ತ-ಮುತ್ತಲಿನ ವಾತಾವರಣವೇ ಪರಿಸರವಾಗಿದೆ. ಅಂದರೆ, ನಮ್ಮ ಸುತ್ತ-ಮುತ್ತನಲ್ಲಿರುವ ಮರ, ಗಿಡ, ಜಲ, ಮುಂತಾದವುಗಳಿಂದ ಕೂಡಿದ ಸ್ವಚ್ಛಂದ ವಾತಾವರಣವಾಗಿದೆ. ನಮ್ಮ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪರಿಸರದ ಪಾತ್ರ ಪ್ರಮುಖವಾಗಿದೆ. ಮಳೆ-ಬೆಳೆ, ಪ್ರಾಣಿ ಸಂಕುಲ ನಶಿಸಲು ನಮ್ಮೆಲ್ಲರ ಉದಾಸೀನತೆಯೇ ಕಾರಣವಾಗುತ್ತಿದೆ. ಇಂದು ಅತಿಯಾದ ತಾಪಮಾನ, ಪರಿಸರ ಮಾಲಿನ್ಯ, ಇದೆಲ್ಲವೂ ನವೀಕರಣದ ಪ್ರಭಾವವಾಗಿದೆ ಎಂದರೆ ತಪ್ಪಾಗಲಾರದು. ಪರಿಸರದ ಪ್ರೀತಿ ಕಾಳಜಿಯನ್ನು ಕಾಣಬೇಕಾದರೆ, ನಮಗೆಲ್ಲ ಉತ್ತಮ ಉದಾಹರಣೆ ಸಾಲುಮರದ ತಿಮ್ಮಕ್ಕ ಇಡೀ ಜಗತ್ತಿಗೆ ಉತ್ತಮ ಮಾದರಿಯಾದ ಪರಿಸರ ಮಾತೆ ಎಂದರೆ ತಪ್ಪಾಗಲಾರದು.

**ಸಾಲುಮರದ ತಿಮ್ಮಕ್ಕನ ಜೀವನ :**

ಸಾಲುಮರದ ತಿಮ್ಮಕ್ಕ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಜನಿಸಿದರು. ಇವರ ತಂದೆ ಚಿಕ್ಕರಂಗಯ್ಯ ತಾಯಿ-ವಿಜಯಮ್ಮ ನವರು ಬಡತನದಲ್ಲಿ ಜನಿಸಿದ ಇವರು ಯಾವುದೇ ಔಪಚಾರಿಕ ಶಿಕ್ಷಣ ಲಭ್ಯವಾಗದೆ ಹತ್ತಿರದ ಒಂದು ಕಲ್ಲು ಗಣಿಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡಿದರು. ಇವರು ಚಿಕ್ಕಯ್ಯನವರನ್ನು ಮದುವೆಯಾಗಿದ್ದರು. ಇವರು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಹುಲಿಕಲ್ ಗ್ರಾಮದವರು. ದುರದೃಷ್ಟವಶಾತ ಇವರಿಗೆ, ಮಕ್ಕಳಿರಲಿಲ್ಲ. 20ನೇ ಶತಮಾನ ಕಂಡ ಅದ್ಭುತ ಮೇರು ವ್ಯಕ್ತಿತ್ವ ಹೊಂದಿದ ಪರಿಸರ ಪ್ರೇಮಿ ಸಾಲುಮರದ ತಿಮ್ಮಕ್ಕ.

**ಸೇವೆ :**

ಮಕ್ಕಳಿಲ್ಲದ ಕಾರಣ ರಸ್ತೆಯ ಬದಿಯಲ್ಲಿ ಆಲದ ಸಸಿಗಳನ್ನು ನೆಟ್ಟು ಅವುಗಳನ್ನು ಮಕ್ಕಳಂತೆ ಭಾವಿಸಿ ಬೆಳೆಸಿದರು. ಮೊದಲವರ್ಷದಲ್ಲಿ 10 ಸಸಿಗಳನ್ನು ನೆರೆಯ ಕುದೂರು ಹಳ್ಳಿಯ ಬಳಿ 4 ಕಿ.ಮೀ. ಉದ್ದಳತೆಯ ದೂರ ನೆಡಲಾಯಿತು. ಹೀಗೆಯೇ ಎರಡನೇ ವರ್ಷ 15 ಮತ್ತು ಮೂರನೇ ವರ್ಷ 20 ಸಸಿಗಳನ್ನು ನೆಡಲಾಯಿತು. ಈ ಗಂಡ-ಹೆಂಡತಿ ಸಸಿಗಳಿಗೆ ನೀರುಣಿಸಲು ಬಿಂದಿಗೆ-ಕೊಳಗಗಳಲ್ಲಿ ನೀರನ್ನು 4 ಕೀ.ಮೀ. ದೂರ ಸಾಗಿಸುತ್ತಿದ್ದರು. ಸಸಿಗಳನ್ನು ಮೇವಿನ ಜಾನುವಾರದಿಂದ ರಕ್ಷಿಸಲು ಸುತ್ತ-ಮುಳ್ಳು ಪೊದೆಗಳನ್ನು ಹೊದಿಸಿ ಕಾಪಾಡಿದರು. ಒಟ್ಟಾರೆ 385 ಆಲದ ಮರಗಳನ್ನು 800 ಇತರೆ ಸಸಿಗಳನ್ನು ನೆಟ್ಟಿದ್ದಾರೆ, ಇಂದಿಗೆ ಅವುಗಳ ಮೌಲ್ಯವು ಸುಮಾರು 15 ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಈ ಮರಗಳ ನಿರ್ವಹಣೆಯನ್ನು ಈಗ ಕರ್ನಾಟಕ ಸರ್ಕಾರವು ವಹಿಸಿಕೊಂಡಿದೆ.

ಇವರ ಈ ಕಾರ್ಯಗಳನ್ನು ಗಮನನಿಸಿ ಹಲವಾರು ಪ್ರಶಸ್ತಿಗಳು ನೀಡಿ ಗೌರವಿಸಲಾಯಿತು. ಅವರಿಗೆ ದೊರೆತ ಪ್ರಶಸ್ತಿಗಳು ಈ ಕೆಳಗಿನಂತಿವೆ :-

* 1995 – ರಾಷ್ಟ್ರೀಯ ಪೈರ ಪ್ರಶಸ್ತಿ
* 1997 – ಇಂದಿರಾ ಪ್ರೀಯದರ್ಶನಿ ವೃಕ್ಷಮಿತ್ರ ಪ್ರಶಸ್ತಿ
* 1997 – ವೀರ ಚಕ್ರ ಪ್ರಶಸ್ತಿ
* 2000 – ಕರ್ನಾಟಕ ಕಲ್ಪವೃಕ್ಷ ಪ್ರಶಸ್ತಿ
* 2006 – ಗಾಡ ಪ್ರಿ ಫಿಲಿಪ್ ಧೀರತರ, ವನಮಾತೆ ಪ್ರಶಸ್ತಿ, ಮಾಗಡಿ ವ್ಯಕ್ತಿ ಪ್ರಶಸ್ತಿ, ಮಹಿಳಾ ರತ್ನ ಪ್ರಶಸ್ತಿ
* 2010 – ರ ಸಾಲಿನ ಪ್ರತಿಷ್ಠಿತ "ನಾಡೋಜ" ಪ್ರಶಸ್ತಿ
* 2019 – ಗಣರಾಜ್ಯೋತ್ಸವ ಸಂದರ್ಭದಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿ
* 2020 – ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ

ಈ ರೀತಿಯಾಗಿ ನಾವು ಸಾಲಮರದ ತಿಮ್ಮಕ್ಕ ಮತ್ತು ಅವರ ಪರಿಸರ ಪ್ರೇಮವನ್ನು ಕಾಣಬಹುದಾಗಿದೆ. ಅನೌಪಚಾರಿಕ ಶಿಕ್ಷಣ ಪಡೆದ ಅವರ ಸಾಧನೆಯೇ ಮುಗಿಲು ಮುಟ್ಟುವಂತಿದ್ದರೆ, ಔಪಚಾರಿಕ ಶಿಕ್ಷಣ ಪಡೆದ ನಮ್ಮೆಲ್ಲರ ಸಾಧನೆ ಯಾವ ಮಟ್ಟಕ್ಕೆರಬೇಕಿದೆ? ಎಂದು ಆಲೋಚಿಸಿ ಮುನ್ನಡೆಯೋಣ ಎಂದು ಆಶಿಸುತ್ತೇನೆ.

ಶಿಲ್ಪಾ ಎಸ್. ಉಪಾಧ್ಯೆ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ




ಶಾಖೆಗಳು 81
ಠೇವು 333+ ಕೋಟಿ
ಸಾಲ 164+ ಕೋಟಿ
ಸದಸ್ಯರು 43+ ಸಾವಿರ
ಗುಣಿತಾವನಿಗಳು 130+ ಕೋಟಿ
ಲಾಭ 2024-25 01+ ಕೋಟಿ




ಹುನ್ನರಗಿ ಗ್ರಾಮದಲ್ಲಿ 15 ಲಕ್ಷ ರೂ. ಮೊತ್ತದಲ್ಲಿ ಸರ್ಕಾರಿ ಹಿರಿಯ ಕನ್ನಡ ಪ್ರಾಥಮಿಕ ಶಾಲೆಯ ನೂತನ ಕೊಠಡಿಯನ್ನು ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಉದ್ಘಾಟಿಸಿ, ಸರಸ್ವತಿ ಮಾತೆಗೆ ಪೂಜೆ ಸಲ್ಲಿಸಿದ ದೃಶ್ಯ.




ವಿಶ್ವಶಾಂತಿ, ಆತ್ಮಕಲ್ಯಾಣ ಹಾಗೂ ಏಕತೆಗಾಗಿ ಜಗತ್ತಿನಾದ್ಯಂತ 108 ದೇಶಗಳಲ್ಲಿ ಏಕಕಾಲಕ್ಕೆ ಆಯೋಜನೆಗೊಂಡಿರುವ ವಿಶ್ವ ನಮೋಕಾರ ಮಹಾಮಂತ್ರ ದಿನದಂದು ನಿಪ್ಪಾಣಿ ನಗರದ ಶ್ರೀ ವೆಂಕಟೇಶ ಮಂದಿರದಲ್ಲಿ ಜೈನ ಸಮಾಜದ ವತಿಯಿಂದ ಆಯೋಜಿಸಿದ ಸಾಮೂಹಿಕವಾಗಿ ನಮೋಕಾರ ಮಹಾಮಂತ್ರ ಪಠಣ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಕಾರ್ಯಕ್ರಮದಲ್ಲಿ ಭಾಗವಹಿಸಿದ ದೃಶ್ಯ.




ಚಾಂದಶಿರದವಾಡ ಗ್ರಾಮದಲ್ಲಿ ಶ್ರೀ 1008 ಪಾರ್ಶ್ವನಾಥ ದಿಗಂಬರ ಜಿನ ಮಂದಿರದ ಪಂಚಕಲ್ಯಾಣ ಪ್ರತಿಷ್ಠಾ ಮಹಾಮಹೋತ್ಸವ, ವಿಶ್ವಶಾಂತಿ ಮಹಾಯಾಗ ಕಾರ್ಯಕ್ರಮದಲ್ಲಿ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಸತ್ಕಾರ ಸ್ವೀಕರಿಸುತ್ತಿರುವ ದೃಶ್ಯ



**ಗೌರವ ನಮನ**

ಸವಿಂಧಾನ ಶಿಲ್ಪಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಜಯಂತಿ ಪ್ರಯುಕ್ತ ನಿಪ್ಪಾಣಿ ನಗರಸಭೆ ಆವರಣದಲ್ಲಿ ಅವರ ಪ್ರತಿಮೆಗೆ ಜೊಲ್ಲೆ ದಂಪತಿ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸುತ್ತಿರುವುದು.



**ಪುಷ್ಪ ನಮನ**

ನಿಪ್ಪಾಣಿ ತಾಲೂಕಿನ ರೈತರು ತಂಬಾಕಿಗೆ ಯೋಗ್ಯ ದರ ಬರಬೇಕೆಂದು ಒತ್ತಾಯಿಸಿ ಆಂದೋಲನ ಮಾಡುತ್ತಿರುವಾಗ 06 ಏಪ್ರಿಲ್ 1981 ರಂದು 09 ಗಂಟೆ ಸುಮಾರಿಗೆ ನಡೆಸಿದ ಗೋಲಿಬಾರನಲ್ಲಿ ಹುತಾತ್ಮರಾದ ಹಿನ್ನಲೆ ಅವರ ಸ್ಮಾರಕಕ್ಕೆ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಭೇಟಿ ನೀಡಿ ಪುಷ್ಪ ನಮನ ಸಲ್ಲಿಸಿದರು




**ಉದ್ಘಾಟನೆ**

ನಿಪ್ಪಾಣಿ ಹಾಲಸಿದ್ದನಾಥ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೋಸಾಯಿಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್) ಶಾಖೆ-ನಿಪ್ಪಾಣಿ 1 ನೇ ಶಾಖೆಯ Extention Counter ಉದ್ಘಾಟನೆ ಹಾಗೂ ಪೂಜಾ ಸಮಾರಂಭವನ್ನು ಕನ್ನೇರಿ ಮಠದ ಪ.ಪೂಜ್ಯ.ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮೀಜಿ ಹಾಗೂ ನಿಪ್ಪಾಣಿಯ ಪ.ಪೂ. ಶ್ರೀ ಪ್ರಾಣಲಿಂಗ ಸ್ವಾಮೀಜಿಯವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು.



**ಭೀಮ ಹೆಜ್ಜೆ**

ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ನಿಪ್ಪಾಣಿಗೆ ಭೇಟಿ ಕೊಟ್ಟು ನೂರು ವರ್ಷದ ಹಿನ್ನೆಲೆಯಲ್ಲಿ ಬಿಜೆಪಿ ವತಿಯಿಂದ ಬೆಂಗಳೂರಿನಿಂದ ನಿಪ್ಪಾಣಿವರೆಗೆ ಆರಂಭವಾಗಿರುವ "ಭೀಮ ಹೆಜ್ಜೆ 100 ರ ಸಂಭ್ರಮ" ಜನ ಜಾಗೃತಿಯ ಐತಿಹಾಸಿಕ ಸಮಾರೋಪ ಸಮಾರಂಭವನ್ನು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ವಿಜಯೇಂದ್ರ ಯಡಿಯೂರಪ್ಪ, ಪ್ರತಿಪಕ್ಷ ನಾಯಕರಾದ ಶ್ರೀ ಆರ್. ಅಶೋಕ ಹಾಗೂ ಜೊಲ್ಲೆ ದಂಪತಿಗಳು, ಗಣ್ಯರ ಜೊತೆಗೂಡಿ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿರುವುದು.



**ಹನುಮಾನ ಜಯಂತಿ**

ನಿಪ್ಪಾಣಿ ನಗರದ ರವಿವಾರ ಪೇಠನಲ್ಲಿರುವ ಶ್ರೀ ಹನುಮಾನ ಜಯಂತಿಯ ನಿಮಿತ್ಯ ಮಂದಿರಕ್ಕೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಭೇಟಿ ನೀಡಿದ ದೃಶ್ಯ.



**ಮಹಾವೀರ ಜಯಂತಿ**

ಜೈನ ಧರ್ಮದ ಪರಮ ಗುರು, 24ನೇ ತೀರ್ಥಂಕರರಾದ ಶ್ರೀ ಮಹಾವೀರ ಜಯಂತಿ ನಿಮಿತ್ಯ ನಡೆಯುತ್ತಿರುವ ಮೆರವಣಿಗೆಯಲ್ಲಿ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಭಾಗವಹಿಸಿದ ದೃಶ್ಯ.




**ಚಾಲನೆ**

ಅಕ್ಕೋಳ ಗ್ರಾಮದಲ್ಲಿ 11.20 ಲಕ್ಷ ರೂಪಾಯಿ ಮೊತ್ತದಲ್ಲಿ ನಿರ್ಮಿಸಲಾದ ಗ್ರಂಥಾಲಯದ ಡಿಜಿಟಲ್ ರೂಪದ 'ಅರಿವು ಕೇಂದ್ರ'ದ ಉದ್ಘಾಟನೆಯನ್ನು ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ನೆರವೇರಿಸಿ ಚಾಲನೆ ನೀಡುತ್ತಿರುವುದು.



**ಭೇಟಿ**

ಬೆಳಗಾವಿ ಜಿಲ್ಲೆಯ ಬಡಾಲ್ ಅಂಕಲಗಿ ಗ್ರಾಮ ದೇವತೆಯ 15 ವರ್ಷಕೊಮ್ಮೆ ನಡೆಯುವ ಶ್ರೀ ಜೋಡಿ ಮಹಾಲಕ್ಷ್ಮೀ ಜಾತ್ರಾ ಮಹೋತ್ಸವದ ನಿಮಿತ್ಯ ದೇವಸ್ಥಾನಕ್ಕೆ ಜೊಲ್ಲೆ ದಂಪತಿ ಭೇಟಿ ನೀಡಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ದೃಶ್ಯ.